<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**<u>ಸಿ.ಸಿ. ಸಂಖ್ಯೆ: 617/2015</u>**

**ಸಾಕ್ಷಿಯನ್ನು ದಿಃ 21.12.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ಶಂಕರಪ್ಪ | ಪಿಡಬ್ಲ್ಯೂ:4 |
| ತಂದೆಯ ಹೆಸರು | ಹನುಮಂತಯ್ಯ | |
| ವಯಸ್ಸು | 62 ವರ್ಷ | |
| ಕೆಲಸ | ನಿವೃತ್ತ ಎ.ಎಸ್.ಐ, | |
| ವಾಸಸ್ಥಳ | ಮೈಸೂರು | |

**<u>ಸಿ.ಆರ್.ಪಿ.ಸಿ ಕಲಂ 299 ರ ಅಡಿ ವಿಚಾರಣೆಃ</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನಾನು ಜುಲೈ 2022 ರಿಂದ ಅಗಸ್ಟ್ 2023 ರವರೆಗೆ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ 4 ರಿಂದ 8 ನೇ ಆರೋಪಿತರಾದ ಜಾವೇದ್ ಅಲಿಯಾಸ್ ರ್ಯಾಂಬೋ, ಅಫ್ಜಲ್ ಅಲಿಯಾಸ್ ಡೀಲರ್, ಸಮೀಉಲ್ಲಾ ಅಲಿಯಾಸ್ ಗೋರು, ಸರ್ದಾರ ಪಾಷ ಮತ್ತು ಸೈಯದ್ ಮುಜಿತಾಬ್ ಎಂಬುವವರಿಗೆ ಪ್ರೋಕ್ಲಮೇಷನ್ ವಾರೆಂಟ್ ಜಾರಿ ಮಾಡಲು ನ್ಯಾಯಾಲಯದಿಂದ ಹೊರಡಿಸಿದ್ದ ಪ್ರೋಕ್ಲಮೇಷನ್ ವಾರೆಂಟ್ ನ್ನು ಸ್ವೀಕರಿಸಿ ಅದನ್ನು ಹೊರಡಿಸಲು ನನ್ನನ್ನು ಕರ್ತವ್ಯಕ್ಕೆ ನೇಮಿಸಿದ್ದ ಮೇರೆಗೆ ಸದರಿ ವಾರೆಂಟ್ ಅನ್ನು ಪಡೆದುಕೊಂಡು ದಿಃ 28.10.2022 ರಂದು 4 ರಿಂದ 7 ನೇ ಆರೋಪಿತರ ವಿಳಾಸವಾದ ಮೈಸೂರು ನಗರದ ಶಾಂತಿ ನಗರ, ಮಹದೇವಪುರ ಮುಖ್ಯ ರಸ್ತೆಯ ವಿಲ್ ಟಾಪ್ ಮೈದಾನದ ಹತ್ತಿರ ಹೋಗಿ ವಿಚಾರಿಸಲಾಗಿ ಅವರ ಪೂರ್ಣ ವಿಳಾಸ ಪತ್ತೆಯಾಗದ ಕಾರಣ

ಸದರಿ ಆರೋಪಿತರನ್ನು ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ. ಅವರು ಪತ್ತೆಯಾದಲ್ಲಿ ಹತ್ತಿರದ ಠಾಣೆಗೆ ಅಥವಾ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಸೂಚಿಸಿದೆನು. ಈ ಬಗ್ಗೆ ಸ್ಥಳದಲ್ಲಿ ರಿಯಾಜ್ ಅಲಿಯಾಸ್ ರಿಯಾಜ್ ಅಹಮ್ಮದ ಮತ್ತು ನವೀದ ಅಲಿಯಾಸ್ ನವೀದ ಪಾಷ ರವರ ಸಮಕ್ಷಮ ಮಧ್ಯಾಹ್ನ 12 ರಿಂದ 2 ಗಂಟೆಯವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ಈ ಬಗ್ಗೆ ಸ್ಥಳದಲ್ಲಿ ಟಾಂ ಟಾಂ ಮಾಡಿಸಿ ಪ್ರೋಕ್ಲಮೇಷನ್ ವಾರೆಂಟ್ ಅನ್ನು ಸದರಿ ಶಾಂತಿನಗರದ ಟಿಪ್ಪು ಹೊಟೇಲ್ ಮುಂಭಾಗ, ಶಾಂತಿನಗರದ ಬಸ್ ನಿಲ್ದಾಣದ ಗೋಡೆಯ ಮೇಲೆ ಮತ್ತು ನ್ಯಾಯಾಲಯದ ಸೂಚನಾ ಫಲಕಕ್ಕೆ ಅಂಟಿಸಿರುತ್ತೇನೆ. ಅದೇ ದಿನ 8 ನೇ ಆರೋಪಿಯ ವಿಳಾಸವಾದ ಮೈಸೂರು ನಗರದ ಬನ್ನಿ ಮಂಟಪ ಸಿ ಲೇ ಔಟ್ ನ ಮುಖ್ಯರಸ್ತೆಯಲ್ಲಿರುವ ಸೀಫನ್ ಸ್ನಾಕ್ಸ್ ಹೋಟೇಲ್ ಬಳಿ ಹೋಗಿ ವಿಚಾರಿಸಲಾಗಿ ಸದರಿ ಆರೋಪಿಯ ಪೂರ್ಣ ವಿಳಾಸ ಇಲ್ಲದ ಕಾರಣ ಸದರಿ ಆರೋಪಿತರನ್ನು ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ. ಆತ ಪತ್ತೆಯಾದಲ್ಲಿ ಹತ್ತಿರದ ಠಾಣೆಗೆ ಅಥವಾ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಸೂಚಿಸಿದೆನು. ಈ ಬಗ್ಗೆ ಸ್ಥಳದಲ್ಲಿ ಚೇತನ ಬಿನ ವೆಂಕಟೇಶ ಮತ್ತು ರಾಜಶೇಖರ ಬಿನ್ ನಾಗರಾಜು ರವರ ಸಮಕ್ಷಮ ಸಂಜೆ 4 ರಿಂದ 5.30 ಗಂಟೆಯವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ಈ ಬಗ್ಗೆ ಸ್ಥಳದಲ್ಲಿ ಟಾಂ ಟಾಂ ಮಾಡಿಸಿ ಪ್ರೋಕ್ಲಮೇಷನ್ ವಾರೆಂಟ್ ಅನ್ನು ಸದರಿ ಸೀಫನ್ ಸ್ನಾಕ್ಸ್ ಹೋಟೇಲ್ ಗೋಡೆಯ ಮುಂಭಾಗಕ್ಕೆ ಮುಖ್ಯ ರಸ್ತೆಯಲ್ಲಿರುವ ಚಿಲ್ಲರೆ ಅಂಗಡಿಯ ಗೋಡೆಗೆ ಮತ್ತು ನ್ಯಾಯಾಲಯದ ಸೂಚನಾ ಫಲಕಕ್ಕೆ ಅಂಟಿಸಿರುತ್ತೇನೆ.

ನನಗೆ ನೀಡಿದ್ದ ಪ್ರೋಕ್ಲಮೇಷನ್ ವಾರೆಂಟ್ ಗಳನ್ನು ಈಗ ನೋಡುತ್ತಿದ್ದು ಅದನ್ನು ನಿಪಿ. 22 ರಿಂದ 26 ಎಂದು, ಪ್ರೋಕ್ಲಮೇಷನ್ ವಾರೆಂಟ್ ಹೊಡಿಸಿದ ಬಗ್ಗೆ ಮಾಡಿರುವ ಎರಡು ಮಹಜರ್ ಗಳನ್ನು ನಿಪಿ. 27 ಮತ್ತು 28 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. 27(ಎ) ಮತ್ತು 28(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಇಲ್ಲ</u>**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.